ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 16, 2015

# ಗೌರಿ ಮತ್ತು ಗಣೇಶ ಹಬ್ಬ :
# ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಸೆಪ್ಟೆಂಬರ್ 16:**

ಗೌರಿ ಮತ್ತು ಗಣೇಶ ಹಬ್ಬಗಳ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಇಷ್ಟಾರ್ಥ ಸಿದ್ಧಿಗಾಗಿ ಆಚರಿಸುವ ಸ್ವರ್ಣಗೌರಿ ವ್ರತ ಹಾಗೂ ವಿಘ್ನ ನಿವಾರಣೆಗಾಗಿ ಆಚರಿಸುವ ಶ್ರೀ ವರಸಿದ್ಧಿವಿನಾಯಕ ವ್ರತಗಳಿಗೆ ಹಿಂದೂ ಧಾರ್ಮಿಕ ಸಂಪ್ರದಾಯಗಳಲ್ಲಿ ವಿಶೇಷ ಸ್ಥಾನವಿದೆ.

ಅಲ್ಲದೆ, ಸ್ವಾತಂತ್ರ್ಯಾಪೂರ್ವದಲ್ಲಿ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರು ಭಾರತೀಯರಲ್ಲಿ ಭಾವೈಕ್ಯತೆಯ ಬೆಸೆಯಲು ಸಾಮೂಹಿಕ ಗಣೇಶೋತ್ಸವಗಳನ್ನು ಆಯೋಜಿಸಿ ಯಶಸಾಧಿಸಿದ್ದು ಇದೀಗ ಇತಿಹಾಸ. ಜಾತ್ಯಾತೀತ ನೆಲೆಗಟ್ಟಿನಲ್ಲಿ ಸೋದರತಾ ಭಾವ ಮೂಡಿಸುವಲ್ಲಿ ಗಣೇಶೋತ್ಸವಗಳು ಪ್ರೇರಣೆ ಹಾಗೂ ಸ್ಫೂರ್ತಿಯನ್ನೀಯಲಿ. ವಿಘ್ನಗಳ ನಿವಾರಕನಾದ ಶ್ರೀ ವಿಘ್ನೇಶ್ವರನು ರಾಜ್ಯದ ಬರ ಪರಿಸ್ಥಿತಿಯನ್ನು ನಿವಾರಿಸಲಿ. ರೈತರ ಬಾಳನ್ನು ಹಸನುಗೊಳಿಸಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದ ಹಾರೈಸಿದ್ದಾರೆ.

**********

ಡಿ ಪಿ ಎಂ.